**ಕರ್ನಾಟಕ ಸರ್ಕಾರ**

**ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು**

**2019–20ನೇ ಸಾಲಿನ ಪಿ.ಬಿ.ಬಿ.ಎಸ್ಸಿ. ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ (ಲ್ಯಾಟರಲ್) ಪ್ರವೇಶಕ್ಕಾಗಿ**

**2nd & Final Offline Counselling (ಆಫ್‌ಲೈನ್ ಅಂತಿಮ ಸುತ್ತು) ಸೀಟು ಹಂಚಿಕೆ.**

ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದುಪಡಿಸಿಕೊಂಡಿರುವ / ಉಳಿದಿರುವ ಪಿ.ಬಿ.ಬಿ.ಎಸ್ಸಿ. ನರ್ಸಿಂಗ್ ಮತ್ತು ಬಿ.ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ (ಲ್ಯಾಟರಲ್) ಸೀಟುಗಳ ವಿವರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆಫ್‌ಲೈನ್ ಕೌನ್ಸಿಲಿಂಗ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಈ ಕೆಳಗೆ ನೀಡಿರುವ ವೇಳಾ ಪಟ್ಟಿಯಂತೆ ನಡೆಸಲಾಗುವುದು. ಅಭ್ಯರ್ಥಿಗಳು ಆಫ್‌ಲೈನ್ ಅಂತಿಮ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಈಗಾಗಲೇ ನೀಡಿರುವ ದಾಖಲಾತಿ ಪರಿಶೀಲನಾ ಚೀಟಿ ಹಾಗೂ ಪ್ರಕ್ರಿಯೆ ಶುಲ್ಕ ರೂ:300/– ಅನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದ ಡಿಮ್ಯಾಂಡ್ ಡ್ರಾಫ್ಟ್‌ನ್ನು (ಬೆಂಗಳೂರಿನಲ್ಲಿ ಸಂದಾಯವಾಗುವಂತೆ) ತಪ್ಪದೇ ಹಾಜರು ಪಡಿಸಬೇಕು.

**2nd & Final Offline Counselling (ಆಫ್‌ಲೈನ್ ಅಂತಿಮ ಸುತ್ತು) ನಲ್ಲಿ ಭಾಗವಹಿಸಲು ಈ ಕೆಳಗಿನ ಅಭ್ಯರ್ಥಿಗಳು ಅರ್ಹರಿರುತ್ತಾರೆ:**

1. ಈಗಾಗಲೇ ಅನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರಬೇಕು.
2. ಮೊದಲನೇ ಸುತ್ತಿನಲ್ಲಿ ಯಾವುದೇ ಸೀಟುಗಳು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳು.
3. ಮೊದಲನೇ ಸುತ್ತಿನಲ್ಲಿ ಸೀಟು ಹಂಚಿಕೆ ಆಗಿದ್ದು, ದಿನಾಂಕ 02–11–2019ರೊಳಗೆ ಪ್ರಾಧಿಕಾರದಲ್ಲಿ ಸೀಟು ರದ್ದು ಪಡಿಸಿಕೊಂಡಿರುವವರು.
4. ಹೊಸದಾಗಿ ಆನ್‌ಲೈನ್ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ದಿನಾಂಕ:04–11–2019ರಂದು ದಾಖಲಾತಿ ಪರೀಶೀಲನೆ ನಂತರವೇ ಆಫ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು.

**2nd & Final Offline Counselling (ಆಫ್‌ಲೈನ್ ಅಂತಿಮ ಸುತ್ತು) ನಲ್ಲಿ ಭಾಗವಹಿಸಲು ಈ ಕೆಳಗಿನ ಅಭ್ಯರ್ಥಿಗಳಿಗೆ ಅರ್ಹತೆ ಇರುವುದಿಲ್ಲ:**

1. ಮೊದಲನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗಿದ್ದು ಕಾಲೇಜಿನಲ್ಲಿ ಪ್ರವೇಶ ಪಡೆದಿರುವವರು.
2. ಮೊದಲನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗಿ ಆಯಾ ಕಾಲೇಜಿನಲ್ಲಿ ಪ್ರವೇಶ ಪಡೆಯಲು ವಿಫಲಾದವರು ಅಥವಾ ಹಂಚಿಕೆಯಾದ ಸೀಟನ್ನು ಪ್ರಾಧಿಕಾರದಲ್ಲಿ ರದ್ದುಪಡಿಸಿಕೊಳ್ಳದೇ ಇರವು ಅಭ್ಯರ್ಥಿಗಳು.

**2nd & Final Offline Counselling (ಆಫ್‌ಲೈನ್ ಅಂತಿಮ ಸುತ್ತು) ಸೀಟು ಹಂಚಿಕೆಯ ವಿವರಗಳು:**

1. ಮೊದಲನೇ ಸುತ್ತಿನ ಸೀಟು ಹಂಚಿಕಯ ನಂತರ ಉಳಿದಿರುವ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆಯನ್ನು ನಡೆಸಲಾಗುವುದು.
2. 2nd and Final Offline Counselling (**ಆಫ್‌ಲೈನ್ ಅಂತಿಮ ಸುತ್ತು**) ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಸೀಟುಗಳ ಲಭ್ಯತೆಯನ್ನು ನೋಡಿ ಭಾಗವಹಿಸಬಹುದಾಗಿದೆ. ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ ಯಾವುದಾದರು ಸೀಟುಗಳು ರದ್ದುಗೊಂಡರೆ ಅಂತಹ ಸೀಟುಗಳನ್ನು ಆಯಾ ಪ್ರವರ್ಗದಲ್ಲಿಯೆ ಹಂಚಿಕೆಗೆ ಪರಿಗಣಿಸಲಾಗುವುದು.
3. ಈಗಾಗಲೇ ಪ್ರಕಟಿಸಿರುವ ವೇಳಾಪಟ್ಟಿಯಂತೆ ಮೊದಲನೇ ಸುತ್ತಿನನ ಸೀಟು ಹಂಚಿಕೆಯ ನಂತರ ರದ್ದುಗೊಂಡಿರುವ / ಉಳಿದಿರುವ ಸೀಟುಗಳನ್ನು ಆಯಾ ವರ್ಗದ ಅಭ್ಯರ್ಥಿಗಳಿಗೆ ಮಾತ್ರ ಮೊದಲು ಹಂಚಿಕೆ ಮಾಡಲಾಗುವುದು. ನಂತರ ಸೀಟುಗಳು ಉಳಿದಲ್ಲಿ de-categorise ಮಾಡಿ ಹಂಚಿಕೆ ಮಾಡಲಾಗುವುದು.
4. ಈ ಸುತ್ತಿನಲ್ಲಿ ಆಯ್ಕೆ ಮಾಡಿಕೊಳ್ಳುವ ಸೀಟಿಗೆ ಸ್ಥಳದಲ್ಲಿಯೆ ಪ್ರಕ್ರಿಯೆ ಶುಲ್ಕವನ್ನು ಪಾವತಿಸಿ ದಿನಾಂಕ: 08–11–2019 ರೊಳಗಾಗಿ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು ಮತ್ತು ಪ್ರವೇಶ ಪಡೆದ ನಂತರ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರವೇಶ ಪಡೆದಿರುವ ಬಗ್ಗೆ ದಾಖಲಿಸಬೇಕು.

| **ಹೊಸದಾಗಿ ನೊಂದಣಿ ಹಾಗೂ ದಾಖಲಾತಿ ಪರಿಶೀಲನೆಗೆ ಮತ್ತೊಂದು ಅವಕಾಶ** |
|---|
| ಪಿ.ಬಿ.ಬಿ.ಎಸ್ಸಿ. ನರ್ಸಿಂಗ್/ ಬಿ.ಎಸ್ಸಿ ಅಲೈಡ್ ಹೆಲ್ತ್ ಕೋರ್ಸ್‌ಗಳ (ಲ್ಯಾಟರಲ್) ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸದೇ ಇದ್ದ ಅಭ್ಯರ್ಥಿಗಳು ದಿನಾಂಕ: **26–10–2019 ರಿಂದ 31–10–2019ರವರೆಗೆ** ಅರ್ಜಿ ಸಲ್ಲಿಸಬಹುದು. |
| ಪಿ.ಬಿ.ಬಿ.ಎಸ್ಸಿ. ನರ್ಸಿಂಗ್/ಬಿ.ಎಸ್ಸಿ ಅಲೈಡ್ ಹೆಲ್ತ್ ಕೋರ್ಸ್‌ಗಳ (ಲ್ಯಾಟರಲ್) ಪ್ರವೇಶಕ್ಕಾಗಿ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ದಾಖಲಾತಿ ಪರಿಶೀಲನೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು (ಇನ್ನೊಮ್ಮೆ ಆನ್‌ಲೈನ್ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ) ಹಾಗೂ ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಿರುವ ಅಭ್ಯರ್ಥಿಗಳೂ ಸಹ **ದಿನಾಂಕ: 04–11–2019 ರಂದು ಮ:2.00 ರಿಂದ 4.00ರ** ಅವಧಿಯಲ್ಲಿ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು ಕೇಂದ್ರದಲ್ಲಿ ಮಾತ್ರ ಹಾಜರಾಗಬೇಕು.<br>**(ಈಗಾಗಲೇ ಪ್ರಕಟಿಸಿರುವ ಮಾಹಿತಿ ಪುಸ್ತಕದಲ್ಲಿ(Information bulletin) ತಿಳಿಸಿರುವ ಅಗತ್ಯ ದಾಖಲೆಗಳನ್ನು ದಾಖಲಾತಿ ಪರಿಶೀಲನೆ ಸಮಯದಲ್ಲಿ ಖಡ್ಡಾಯವಾಗಿ ಹಾಜರುಪಡಿಸಬೇಕು)** |

**2019–20ನೇ ಸಾಲಿನ ಪಿ.ಬಿ.ಬಿ.ಎಸ್ಸಿ. ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ (ಲ್ಯಾಟರಲ್) ಪ್ರವೇಶಕ್ಕಾಗಿ**

2nd & Final Offline Counselling (ಆಫ್‌ಲೈನ್ ಅಂತಿಮ ಸುತ್ತು) ಸೀಟು ಹಂಚಿಕೆ ವೇಳಾಪಟ್ಟಿ.

| ಕ್ರ. ಸಂ. | ಕೋರ್ಸ್‌ಗಳ ವಿವರಗಳು | ದಿನಾಂಕ | ಎಲ್ಲಾ ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ (SC,ST,Cat-I,2A,2B,3A,3B) ಸಮಯ (ರ್‍ಯಾಂಕ್ 1 ರಿಂದ ಕೊನೆ ರ್‍ಯಾಂಕ್‌ವರೆಗೆ) | ಸಾಮಾನ್ಯ ವರ್ಗ ಮತ್ತು ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ ಸಮಯ (ರ್‍ಯಾಂಕ್ 1 ರಿಂದ ಕೊನೆ ರ್‍ಯಾಂಕ್‌ವರೆಗೆ) |
|---|---|---|---|---|
| 01. | ಪಿ.ಬಿ.ಎಸ್ಸಿ ನರ್ಸಿಂಗ್ | 06–11–2019 | ಬೆಳಗ್ಗೆ :9.00 ರಿಂದ ಮದ್ಯಾಹ್ನ 11.00ರವರೆಗೆ | ಬೆಳಗ್ಗೆ :11.00 ರಿಂದ ಮದ್ಯಾಹ್ನ 01.00ರವರೆಗೆ |
| 02. | ಬಿ.ಎಸ್ಸಿ ಅಲೈಡ್ ಹೆಲ್ತ್ ಕೋರ್ಸ್‌ಗಳಿಗೆ (ಲ್ಯಾಟರಲ್) | 07–11–2019 | ಬೆಳಗ್ಗೆ :9.00 ರಿಂದ ಮದ್ಯಾಹ್ನ 11.00ರವರೆಗೆ | ಬೆಳಗ್ಗೆ :11.00 ರಿಂದ ಮದ್ಯಾಹ್ನ 01.00ರವರೆಗೆ |
| 03. | ಆಯ್ಕೆ ಮಾಡಿಕೊಂಡ ಕಾಲೇಜಿಗೆ ಅಭ್ಯರ್ಥಿಗಳು ಕಾಲೇಜಿಗೆ ವರದಿ ಮಾಡಿಕೊಳ್ಳುವ ಕೊನೆಯ ದಿನಾಂಕ | 08–11–2019 | | |

Sd/-

Director, Medical Education

Date: 25.10.2019

Place: Bangalore.

**ಕರ್ನಾಟಕ ಸರ್ಕಾರ**

**ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು**

**2019–20ನೇ ಸಾಲಿನ ಬಿ.ಪಿ.ಟಿ. ಕೋರ್ಸ್‌ನ (ಲ್ಯಾಟರಲ್) ಪ್ರವೇಶಕ್ಕಾಗಿ**

Offline Counselling (ಆಫ್‌ಲೈನ್) ಸೀಟು ಹಂಚಿಕೆ.

ಬಿ.ಪಿ.ಟಿ. ಲ್ಯಾಟರಲ್ ಎಂಟ್ರಿ ಕೋರ್ಸ್‌ಗೆ ದಿನಾಂಕ: **26–10–2019 ರಿಂದ 31–10–2019ರವರೆಗೆ** ಅರ್ಜಿ ಆಹ್ವಾನಿಸಲಾಗಿದೆ ಕೋರ್ಸ್‌ಗಳ (ಲ್ಯಾಟರಲ್) ಸೀಟುಗಳ ವಿವರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆಫ್‌ಲೈನ್ ಕೌನ್ಸಿಲಿಂಗ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಈ ಕೆಳಗೆ ನೀಡಿರುವ ವೇಳಾ ಪಟ್ಟಿಯಂತೆ ನಡೆಸಲಾಗುವುದು. **ದಿನಾಂಕ: 04–11–2019ರಂದು ಮ:3.00 ರಿಂದ 4.00ರ** ಅವಧಿಯಲ್ಲಿ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು ಕೇಂದ್ರದಲ್ಲಿ ತಪ್ಪದೇ ಹಾಜರಾಗಬೇಕು.

**ಬಿ.ಪಿ.ಟಿ. ಲ್ಯಾಟರಲ್ ಎಂಟ್ರಿ ಕೋರ್ಸ್‌ಗೆ ಶೈಕ್ಷಣಿಕ ಅರ್ಹತೆಗಳು:**

1. ಅಭ್ಯರ್ಥಿಯು ಕರ್ನಾಟಕ ಸರ್ಕಾರ, ಅರೆವೈದ್ಯಕೀಯ ಮಂಡಳಿಯಿಂದ ಮಾನ್ಯತೆ ಪಡೆದ ಯಾವುದಾದರು ಶಿಕ್ಷಣ ಸಂಸ್ಥೆಯಿಂದ ಡಿಪ್ಲೊಮೊ ಪಿಸಿಯೊಥೆರಪಿ ಕೋರ್ಸ್‌ನಲ್ಲಿ ತೇರ್ಗಡೆಯೊಂದಿರಬೇಕು ಮತ್ತು ಕರ್ನಾಟಕದಲ್ಲಿ ಏಳು ವರ್ಷಗಳು ವ್ಯಾಸಂಗ ಮಾಡಿರಬೇಕು.

**ಬಿ.ಪಿ.ಟಿ. ಲ್ಯಾಟರಲ್ ಎಂಟ್ರಿ ಕೋರ್ಸ್‌ಗೆ ದಾಖಲಾತಿ ಪರಿಶೀಲನೆಗೆ :**

ಈ ಮುಂದೆ ಹೇಳಿರುವ ಮೂಲ ದಾಖಲೆಗಳು ಮತ್ತು ದೃಡೀಕರಿಸಿರುವ ಅವುಗಳ ಜೆರಾಕ್ಸ್ ಪ್ರತಿಗಳ ಒಂದು ಸೆಟ್ಟನ್ನು ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗಾಗಿ ಕಡ್ಡಾಯವಾಗಿ ಹಾಜರುಪಡಿಸಬೇಕು

i. ಭರ್ತಿ ಮಾಡಿ ಸಲ್ಲಿಸಿರುವ ಆನ್‌ಲೈನ್ ಅರ್ಜಿ ನಮೂನೆಯ ಅಂತಿಮ ಪ್ರತಿ.

ii. ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ.

iii. ದ್ವಿತೀಯ ಪಿಯುಸಿ /12ನೇ ತರಗತಿಯ ಅಂಕಪಟ್ಟಿ ಅನ್ವಯಿಸಿದಲ್ಲಿ ಮಾತ್ರ,

iv. ಬಿ.ಪಿ.ಟಿ ಲ್ಯಾಟರಲ್ ಎಂಟ್ರಿ ಕೋರ್ಸ್‌ಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ಯಾರಾ ಮೆಡಿಕಲ್ ಮಂಡಳಿಯಿಂದ ನೀಡಿರುವ ಅಂಕಪಟ್ಟಿಗಳನ್ನು (ಡಿ.ಪಿ.ಟಿ)

v. 1 ರಿಂದ ಡಿಪ್ಲಮೋವರೆಗೆ ಒಟ್ಟು 7 ವರ್ಷದ ವ್ಯಾಸಂಗ ಪ್ರಮಾಣಪತ್ರ.
   - 1 ರಿಂದ 10ನೇ ತರಗತಿಯ ವ್ಯಾಸಂಗ ಪ್ರಮಾಣ ಪತ್ರಕ್ಕೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಮೇಲುರುಜು ಸಹಿ ಹೊಂದಿರಬೇಕು.
   - ಪದವಿ ಪೂರ್ವ ವ್ಯಾಸಂಗ ಪ್ರಮಾಣ ಪತ್ರಕ್ಕೆ ಸಂಬಂದಿಸಿದ ಪದವಿ ಪೂರ್ವ ಉಪ ನಿರ್ದೇಶಕರ ಮೇಲುರುಜು ಸಹಿ ಹೊಂದಿರಬೇಕು.
   - (CBSE / ICSE ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಬಿ.ಇ.ಓ ಅಥವಾ ಡಿ.ಡಿ.ಪಿ.ಯು ಮೇಲುರುಜು ಸಹಿ ಮಾಡುವ ಅಗತ್ಯವಿರುವುದಿಲ್ಲ).

vi. ಮೀಸಲಾತಿ ಪ್ರಯೋಜನಗಳನ್ನು ಕೋರುವುದಕ್ಕೆ ಸಂಭಂಧಿಸಿದಂತೆ ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದಿರುವ ಜಾತಿ ಪ್ರಮಾಣ ಪತ್ರ/ಜಾತಿ ಮತ್ತು ಆದಾಯ ಪ್ರಮಾಣಪತ್ರ/ಆದಾಯ ಪ್ರಮಾಣ ಪತ್ರಗಳು.

vii. ಹೈದರಾಬಾದ್ – ಕರ್ನಾಟಕ ಪ್ರವೇಶ ಮಿಸಲಾತಿ (ಅನುಚೇದ 371 (ಜೆ) ಯನ್ನು ಕೋರುವ ವಿದ್ಯಾರ್ಥಿಗಳು ಸಂಬಂಧಪಟ್ಟ ಉಪ ವಿಭಾಗಧಿಕಾರಿ (ಅಸಿಸ್ಟೆಂಟ್ ಕಮಿಷನರ್)ಅವರು ಅನುಬಂಧ–ಎ (ಅರ್ಹತಾ ಪ್ರಮಾಣಪತ್ರ ನಿಯಮ 3(3) ರಲ್ಲಿ ನೀಡಿರುವ ಪ್ರಮಾಣಪತ್ರ

**ಆಫ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಈ ಕೆಳಗಿನ ಅಭ್ಯರ್ಥಿಗಳು ಮಾತ್ರ ಅರ್ಹರಿರುತ್ತಾರೆ:**

1. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ದಿನಾಂಕ: 04–11–2019ರಂದು ಅಪರಾಹ್ನ 3.00ಕ್ಕೆ ಸಂಬಂದ ಪಟ್ಟ ಎಲ್ಲಾ ಮೂಲ ದಾಖಲೆಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು. ದಾಖಲಾತಿ ಪರಿಶೀಲನೆ ನಂತರ ನಿಗದಿತ ದಿನಾಂಕದಂದು ಆಫ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು.

**ಆಫ್‌ಲೈನ್ ಸೀಟು ಹಂಚಿಕೆಯ ವಿವರಗಳು:**

1. ಈ ಸುತ್ತಿನಲ್ಲಿ ಆಯ್ಕೆ ಮಾಡಿಕೊಳ್ಳುವ ಸೀಟಿಗೆ ಸ್ಥಳದಲ್ಲಿಯೆ ಪ್ರಕ್ರಿಯೆ ಶುಲ್ಕವನ್ನು ಪಾವತಿಸಿ ದಿನಾಂಕ: 08–11–2019 ರೊಳಗಾಗಿ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು ಮತ್ತು ಪ್ರವೇಶ ಪಡೆದ ನಂತರ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರವೇಶ ಪಡೆದಿರುವ ಬಗ್ಗೆ ದಾಖಲಿಸಬೇಕು.
2. ಆಫ್‌ಲೈನ್ ಸೀಟು ಹಂಚಿಕೆ MOPUP ROUND (**ಆಫ್‌ಲೈನ್ ಅಂತಿಮ ಸುತ್ತು**) ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಸೀಟುಗಳ ಲಭ್ಯತೆಯನ್ನು ನೋಡಿ ಭಾಗವಹಿಸಬಹುದಾಗಿದೆ.
3. ಈಗಾಗಲೇ ಪ್ರಕಟಿಸಿರುವ ವೇಳಾಪಟ್ಟಿಯಂತೆ ಸೀಟುಗಳನ್ನು ಆಯಾ ವರ್ಗದ ಅಭ್ಯರ್ಥಿಗಳಿಗೆ ಮಾತ್ರ ಮೊದಲು ಹಂಚಿಕೆ ಮಾಡಲಾಗುವುದು. ನಂತರ ಸೀಟುಗಳು ಉಳಿದಲ್ಲಿ de-categorise ಮಾಡಿ ಹಂಚಿಕೆ ಮಾಡಲಾಗುವುದು.
4. ಅಭ್ಯರ್ಥಿಗಳು ಪ್ರಾಧಿಕಾರದಿಂದ ನೀಡಿರುವ ದಾಖಲಾತಿ ಪರಿಶೀಲನಾ ಚೀಟಿಯನ್ನು ತಪ್ಪದೆ ಹಾಜರು ಪಡಿಸಬೇಕು ಹಾಗೂ ಪ್ರಕ್ರಿಯೆ ಶುಲ್ಕ ರೂ:300/– ಅನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದ ಡಿಮ್ಯಾಂಡ್ ಡ್ರಾಫ್ಟ್‌ನ್ನು (ಬೆಂಗಳೂರಿನಲ್ಲಿ ಸಂದಾಯವಾಗುವಂತೆ)

| **ಬಿ.ಪಿ.ಟಿ. (ಲ್ಯಾಟರಲ್) ಹೊಸದಾಗಿ ನೊಂದಣಿ ಹಾಗೂ ದಾಖಲಾತಿ ಪರಿಶೀಲನೆಗೆ ವೇಳಾಪಟ್ಟಿ.** |
|---|
| ಬಿ.ಪಿ.ಟಿ. (ಲ್ಯಾಟರಲ್) ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸದೇ ಇದ್ದ ಅಭ್ಯರ್ಥಿಗಳು ದಿನಾಂಕ: **26–10–2019 ರಿಂದ 31–10–2019ರವರೆಗೆ** ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಅಪ್ಲಿಕೇಷನ್ ಲಿಂಕ್: |
| ಬಿ.ಪಿ.ಟಿ. (ಲ್ಯಾಟರಲ್) ಪ್ರವೇಶಕ್ಕಾಗಿ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ದಾಖಲಾತಿ ಪರಿಶೀಲನೆಗೆ **ದಿನಾಂಕ: 04–11–2019ರಂದು ಮ:3.00 ರಿಂದ 4.00ರ** ಅವಧಿಯಲ್ಲಿ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು ಕೇಂದ್ರದಲ್ಲಿ ಮಾತ್ರ ಹಾಜರಾಗಬಹುದಾಗಿದೆ. |

**ಆಫ್‌ಲೈನ್ ಸುತ್ತಿನ ಹಂಚಿಕೆಯ ವೇಳಾಪಟ್ಟಿ–2019**

| ಕ್ರ. ಸಂ. | ಕೋರ್ಸ್‌ಗಳ ವಿವರಗಳು | ದಿನಾಂಕ | ಎಲ್ಲಾ ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ (SC,ST,Cat-I,2A,2B,3A,3B) ಸಮಯ (ರ್‍ಯಾಂಕ್ 1 ರಿಂದ ಕೊನೆ ರ್‍ಯಾಂಕ್‌ವರೆಗೆ) | ಸಾಮಾನ್ಯ ವರ್ಗ ಮತ್ತು ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ ಸಮಯ (ರ್‍ಯಾಂಕ್ 1 ರಿಂದ ಕೊನೆ ರ್‍ಯಾಂಕ್‌ವರೆಗೆ) |
|---|---|---|---|---|
| 01. | ಬಿ.ಪಿ.ಟಿ. ಲ್ಯಾಟರಲ್ | 07–11–2019 | ಮದ್ಯಾಹ್ನ 2.00 ರಿಂದ ಮದ್ಯಾಹ್ನ 3.00ರವರೆಗೆ | ಮದ್ಯಾಹ್ನ 3.00 ರಿಂದ 4.00ರವರೆಗೆ |
| 03. | ಆಯ್ಕೆ ಮಾಡಿಕೊಂಡ ಕಾಲೇಜಿಗೆ ಅಭ್ಯರ್ಥಿಗಳು ಕಾಲೇಜಿಗೆ ವರದಿ ಮಾಡಿಕೊಳ್ಳುವ ಕೊನೆಯ ದಿನಾಂಕ | 08–11–2019 | | |

Sd/-

Date: 25.10.2019

Director, Medical Education

Place: Bangalore.